**ಕರ್ನಾಟಕ ವಿಧಾನ ಪರಿಷತ್ತು**

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 349 |
| ಮಾನ್ಯ ಸದಸ್ಯರ ಹೆಸರು | ಶ್ರೀ ಎಂ ನಾಗರಾಜು<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದವರು | ಅಬಕಾರಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | 16-02-2023 |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಅಬಕಾರಿ ಇಲಾಖೆಯಲ್ಲಿ ಅಬಕಾರಿ ನಿರೀಕ್ಷಕ ಮತ್ತು ಇತರೆ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಲು ಕೈಗೊಳ್ಳಲಾದ ಕ್ರಮಗಳೇನು: ಈ ಹುದ್ದೆಗಳಿಗೆ ಪಾರದರ್ಶಕವಾಗಿ ಸೂಕ್ತ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ತೆಗೆದುಕೊಂಡ ಅಥವಾ ತೆಗೆದುಕೊಳ್ಳಲು ಉದ್ದೇಶಿಸಿರುವ ಕ್ರಮಗಳೇನು; ಹುದ್ದೆ ಭರ್ತಿಗಾಗಿ ಇರುವ ಮಾನದಂಡಗಳೇನು; (ವಿವರ ನೀಡುವುದು) | ಅಬಕಾರಿ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕೆಳಕಂಡಂತೆ ಕ್ರಮವಹಿಸಲಾಗುತ್ತಿದೆ.<br><br>**<u>ಪದೋನ್ನತಿ</u>**<br><br>ಅಬಕಾರಿ ನಿರೀಕ್ಷಕರ ವೃಂದವು ಸಂಪೂರ್ಣ ಪದೋನ್ನತಿ ವೃಂದವಾಗಿದ್ದು, ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಂತೆ ಪೂರಕ ವೃಂದಗಳಾದ ಅಬಕಾರಿ ಉಪ ನಿರೀಕ್ಷಕರು / ಪ್ರಥಮ ದರ್ಜೆ ಸಹಾಯಕರು ಮತ್ತು ಶೀಘ್ರಲಿಪಿಗಾರರ ವೃಂದಗಳಿಂದ ಶೇ.80:18:2 ರಂತೆ ಮತ್ತು ಇತರೆ ವೃಂದಗಳಲ್ಲಿ ಪದೋನ್ನತಿ ಕೋಟಾದಡಿ ಖಾಲಿ ಇರುವ ಹುದ್ದೆಗಳಿಗೆ ಅರ್ಹ ನೌಕರರುಗಳ ಲಭ್ಯತೆಯನ್ನು ಆಧರಿಸಿ ಜೇಷ್ಠತೆಯನುಸಾರ ಪದೋನ್ನತಿ ಮೂಲಕ ಭರ್ತಿ ಮಾಡಲು ಕ್ರಮವಹಿಸಲಾಗುತ್ತಿದೆ<br><br>**<u>ನೇರ ನೇಮಕಾತಿ</u>**<br><br>1. **ಅಬಕಾರಿ ಉಪ ಅಧೀಕ್ಷಕರ** ಹುದ್ದೆಯಲ್ಲಿ ಖಾಲಿ ಇರುವ ಹುದ್ದೆಗಳಲ್ಲಿ 5 ಹುದ್ದೆಗಳಿಗೆ ಕೆ.ಪಿ.ಎಸ್.ಸಿ. ಯಿಂದ ಅಂತಿಮ ಆಯ್ಕೆ ಪಟ್ಟಿ ಸ್ವೀಕೃತವಾಗಿದ್ದು, ನೇಮಕಾತಿ ಆದೇಶ ಹೊರಡಿಸುವ ಸಂಬಂಧ ದಾಖಲಾತಿಗಳ ಪರಿಶೀಲನೆ ನಡೆಸಲಾಗುತ್ತಿದ್ದು, ನೇಮಕಾತಿ ಆದೇಶ ಹೊರಡಿಸುವ ಪ್ರಕ್ರಿಯೆ |

ಪ್ರಗತಿಯಲ್ಲಿದೆ. ಉಳಿದಂತೆ ಖಾಲಿ ಇರುವ 12 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಕೆ.ಪಿ.ಎಸ್.ಸಿ. ಯಿಂದ ಭರ್ತಿ ಮಾಡಲು ಕ್ರಮವಹಿಸಲಾಗುತ್ತಿದೆ.

2. **ಅಬಕಾರಿ ಉಪ ನಿರೀಕ್ಷಕರ** ಹುದ್ದೆಯಲ್ಲಿ 2019ನೇ ಸಾಲಿನಲ್ಲಿ 59 ಹುದ್ದೆಗಳ ಪೈಕಿ ನೇಮಕಾತಿಗೆ ಬಾಕಿ ಉಳಿದಿರುವ ಒಟ್ಟು 14 ಅಭ್ಯರ್ಥಿಗಳಿಗೆ ಅಂತಿಮ ತಿಳುವಳಿಕೆ ಪತ್ರ ನೀಡಲಾಗಿದ್ದು, ಅಭ್ಯರ್ಥಿಗಳ ನೇಮಕಾತಿ ರದ್ದುಪಡಿಸಿದ ನಂತರದಲ್ಲಿ ಶೇ.10 ರಷ್ಟು ಹೆಚ್ಚುವರಿ ಆಯ್ಕೆಪಟ್ಟಿ ಸಲ್ಲಿಸಲು ಕೆ.ಪಿ.ಎಸ್.ಸಿ ಗೆ ಪ್ರಸ್ತಾವನೆ ಸಲ್ಲಿಸಲು ಹಾಗೂ ಖಾಲಿ ಇರುವ ಹುದ್ದೆಗಳ ಪೈಕಿ ಒಟ್ಟು 227 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಕ್ರಮವಹಿಸಲಾಗುತ್ತಿದೆ.

3. **ಪ್ರಥಮ ದರ್ಜೆ ಸಹಾಯಕರ** ಹುದ್ದೆಯಲ್ಲಿ ಖಾಲಿ ಇರುವ ಹುದ್ದೆಗಳಲ್ಲಿ 30 ಹುದ್ದೆಗಳಿಗೆ ಕೆ.ಪಿ.ಎಸ್.ಸಿ. ಯಿಂದ ಅಂತಿಮ ಆಯ್ಕೆ ಪಟ್ಟಿ ಸ್ವೀಕೃತವಾಗಿದ್ದು, ಒಟ್ಟು 23 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ಹೊರಡಿಸಲಾಗಿರುತ್ತದೆ. ಉಳಿದಂತೆ ಖಾಲಿ ಇರುವ ಹುದ್ದೆಗಳ ಪೈಕಿ ಸ್ಥಳೀಯ ವೃಂದದಲ್ಲಿ ಒಟ್ಟು 7 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಕೆ.ಪಿ.ಎಸ್.ಸಿ. ಯಿಂದ ಭರ್ತಿ ಮಾಡಲು ಕ್ರಮವಹಿಸಲಾಗುತ್ತಿದೆ.

4. **ಅಬಕಾರಿ ಪೇದೆ** ಹುದ್ದೆಯಲ್ಲಿ 2019 ನೇ ಸಾಲಿನಲ್ಲಿನ 1003 ಹುದ್ದೆಗಳಲ್ಲಿ ಕರ್ತವ್ಯಕ್ಕೆ ಹಾಜರಾಗದ ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ ಶೇ.10ರಷ್ಟು ಹೆಚ್ಚುವರಿ ಆಯ್ಕೆ ಪಟ್ಟಿ ಸಲ್ಲಿಸಲು ಕೆ.ಪಿ.ಎಸ್.ಸಿ. ಯನ್ನು ಕೋರಲಾಗಿದೆ.

5. **ವಾಹನ ಚಾಲಕರು, ಬೆರಳಚ್ಚುಗಾರರು ಮತ್ತು ಗ್ರೂಪ್-ಡಿ** ವೃಂದದಲ್ಲಿ ಮಂಜೂರಾದ ಖಾಲಿ ಹುದ್ದೆಗಳ ಎದುರಾಗಿ ಹೊರಗುತ್ತಿಗೆ ಮೇಲೆ ಸೇವೆಯನ್ನು ಪಡೆದು ಕಾರ್ಯನಿರ್ವಹಿಸಲಾಗುತ್ತಿದೆ.



Generated from eOffice by GOPALAIAH K, FD-EXCISE MIN(GK), EXCISE MINISTER, FINANCE DEPT.SEC on 16/02/2023 10:27 AM

| | | |
|---|---|---|
| ಆ) | ಅಬಕಾರಿ ಇಲಾಖೆಯು ನಿಗಧಿಪಡಿಸಿದ ಆದಾಯ ಸಂಗ್ರಹಣೆ ಮಾಡಿದೆಯೇ; | ರಾಜ್ಯ ಸರ್ಕಾರವು ಆಯವ್ಯಯದಲ್ಲಿ ಅಬಕಾರಿ ಇಲಾಖೆಗೆ ಕಳೆದ ಮೂರು ವರ್ಷಗಳಲ್ಲಿ ನಿಗದಿ ಪಡಿಸಿದ ಗುರಿ ಮತ್ತು ಸಂಗ್ರಹಿಸಿದ ಅಬಕಾರಿ ರಾಜಸ್ವದ (ಆದಾಯ) ವಿವರಗಳು ಕೆಳಕಂಡಂತಿದೆ. |

| ಕ್ರ.ಸಂ. | ವರ್ಷ | ಆಯವ್ಯಯದಲ್ಲಿ ನಿಗಧಿಪಡಿಸಿದ ಗುರಿ (ರೂ.ಕೋಟಿಗಳಲ್ಲಿ) | ಸಂಗ್ರಹಿಸಲಾದ ಅಬಕಾರಿ ರಾಜಸ್ವ (ರೂ.ಕೋಟಿಗಳಲ್ಲಿ) | ಗುರಿಗೆ ಶೇಕಡಾ ವಾರು ಸಾಧನೆ |
|---|---|---|---|---|
| 1. | 2019–20 | 20,950.00 | 21,583.95 | 103.03% |
| 2. | 2020–21 | 22,700.00 | 23,332.10 | 102.78% |
| 3. | 2021–22 | 24,580.00 | 26,377.68 | 107.31% |
| 4. | 2022–23 | 29,000.00 | 24,724.27 (ಮರು ಹೊಂದಾಣಿಕೆಗೆ ಒಳಪಟ್ಟಿದೆ) | 85.26% |

ಸರ್ಕಾರವು ನಿಗಧಿಪಡಿಸಿದ ಗುರಿಯನ್ನು ಪ್ರತಿ ವರ್ಷ ಶೇ.100ರಷ್ಟು ಸಾಧಿಸಲಾಗುತ್ತಿದ್ದು, ಪ್ರಸ್ತುತ ವರ್ಷದಲ್ಲಿ ನಿಗಧಿಪಡಿಸಿದ ಗುರಿಯನ್ನು ಶೇ.100ರಷ್ಟು ಸಾಧಿಸಲು ಇಲಾಖೆಯು ಕ್ರಮಕೈಗೊಳ್ಳುತ್ತಿದೆ.

| | | |
|---|---|---|
| ಇ) | ಅಬಕಾರಿ ಇಲಾಖೆಯ ಸಿಎಲ್–2 ಪರವಾನಗಿ ಹೊಂದಿರುವ ಮದ್ಯದಂಗಡಿಗಳಲ್ಲಿ ಮದ್ಯವನ್ನು ಚಿಲ್ಲರೆ ಮಾರಾಟ ಮಾಡುತ್ತಿದ್ದು, ಅದೇ ಸ್ಥಳದಲ್ಲಿ ಗ್ರಾಹಕರು ಮಧ್ಯ ಸೇವಿಸುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದಿಯೇ; ಇದರಿಂದ ಸಮಾಜದ ಸ್ವಾಸ್ಥ್ಯ ಹಾಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ ಸಮಾಜದ ಸ್ವಾಸ್ಥ್ಯವನ್ನು ಕಾಪಾಡಲು ಸರ್ಕಾರ | ಇಲಾಖೆಯಿಂದ ನೀಡಲಾಗುವ ಸಿಎಲ್–2 ಸನ್ನದುಗಳಲ್ಲಿ ಮದ್ಯವನ್ನು ಚಿಲ್ಲರೆಯಾಗಿ ಮಾರಾಟ ಮಾಡಲು ಅವಕಾಶವಿರುವುದಿಲ್ಲ, ಮುಚ್ಚಿದ ಬಿರುಡೆಯೊಂದಿಗೆ ಮದ್ಯವನ್ನು ಮಾರಾಟ ಮಾಡುವ ಷರತ್ತನ್ನು ವಿಧಿಸಲಾಗಿರುತ್ತದೆ. ಕೆಲವು ಸನ್ನದುದಾರರು ಇಲ್ಲವೇ ಅವರ ಅಧಿಕೃತ ನೌಕರರು ಮದ್ಯವನ್ನು ಚಿಲ್ಲರೆಯಾಗಿ ಮಾರಾಟ ಮಾಡಿ ಸನ್ನದು ಸ್ಥಳದಲ್ಲಿಯೇ ಸೇವನೆಗೆ ಅವಕಾಶ ಮಾಡಿಕೊಟ್ಟಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆ.<br><br>ಹೀಗೆ ಸನ್ನದು ಷರತ್ತು ಉಲ್ಲಂಘಿಸುವ ಸನ್ನದುದಾರರ ವಿರುದ್ಧ ಕರ್ನಾಟಕ ಅಬಕಾರಿ ಕಾಯ್ದೆಯನ್ವಯ ಪ್ರಕರಣಗಳನ್ನು |



Generated from eOffice by GOPALAIAH K, FD-EXCISE MIN(GK), EXCISE MINISTER, FINANCE DEPT.SEC on 16/02/2023 10:27 AM

| | | |
|---|---|---|
| | ಕೈಗೊಂಡಿರುವ ಕ್ರಮಗಳೇನು? | ದಾಖಲಿಸಲಾಗುತ್ತಿದ್ದು, ಕಳೆದ ಮೂರು ವರ್ಷಗಳಲ್ಲಿ ದಾಖಲಿಸಿದ ಪ್ರಕರಣಗಳ ವಿವರ ಕೆಳಕಂಡಂತಿದೆ. |

| ಅಬಕಾರಿ ಸಾಲು (ಜುಲೈ ರಿಂದ ಜೂನ್ ಮಾಹೆಯವರೆಗೆ) | ದಾಖಲಿಸಿದ ಪ್ರಕರಣಗಳ ಸಂಖ್ಯೆ |
|---|---|
| 2020–21 | 471 |
| 2021–22 | 524 |
| 2022–23 (ಜನವರಿ ಅಂತ್ಯಕ್ಕೆ) | 361 |

ಆಇ 11 ಇಎಲ್‌ಕ್ಯೂ 2023

(ಕೆ. ಗೋಪಾಲಯ್ಯ)
ಅಬಕಾರಿ ಸಚಿವರು